ಶ್ರೀ ಕಳಶಪ್ಪ ಜಿ. ಬಂಡಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು) :

ಅ) 2266 ಬಾಂಡ್‌ಗಳನ್ನು ನೀಡಬೇಕಾಗಿರುತ್ತದೆ.

ವಿಧಾನಸಭಾ ಕ್ಷೇತ್ರವಾರು ವಿವರ ಈ ಕೆಳಕಂಡಂತಿದೆ.

ವಿಧಾನ ಸಭಾ ಕ್ಷೇತ್ರ	ನೀಡಬೇಕಾಗಿರುವ ಬಾಂಡ್‌ಗಳ ಸಂಖ್ಯೆ
ಬೀದರ್ ಉತ್ತರ	300
ಬೀದರ್ ದಕ್ಷಿಣ	179
ಹುಮ್ನಾಬಾದ್	525
ಬಸವಕಲ್ಯಾಣ	583
ಭಾಲ್ಕಿ	644
ಸಂತಪುರ	35
ಒಟ್ಟು	**2266**

ಆ) ಅನುದಾನದ ಲಭ್ಯತೆಗನುಗುಣವಾಗಿ ಬಾಂಡ್‌ಗಳನ್ನು ಮುದ್ರಿಸಿ ವಿತರಿಸಲು ಕ್ರಮ ಕೈಗೊಳ್ಳಲಾಗುವುದು.

ಇ) ಮೇಲಿನಂತೆ.

ಈ) ಬೀದರ್ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಬಾಕಿ ಇರುವ ಬಾಂಡ್‌ಗಳ ಸಂಖ್ಯೆ: 179

ಕುಂದಗೋಳ ಮತಕ್ಷೇತ್ರದಲ್ಲಿ ಹೊಸದಾಗಿ ಪ್ರೌಢಶಾಲೆ ಪ್ರಾರಂಭ

206 (720) ಶ್ರೀ ಚಿಕ್ಕನಗೌಡ್ರ ಸಿದ್ದನಗೌಡ ಈಶ್ವರಗೌಡ (ಕುಂದಗೋಳ) :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಕುಂದಗೋಳ ಮತಕ್ಷೇತ್ರ ವ್ಯಾಪ್ತಿಯಲ್ಲಿ ಹೊಸದಾಗಿ ಸರ್ಕಾರಿ ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜು ಪ್ರಾರಂಭಿಸುವ ಕೋರಿಕೆ ಬಂದಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಅ) ಹಾಗಿದ್ದಲ್ಲಿ, ಇಲ್ಲಿಯವರೆಗೆ ಮಂಜೂರಾತಿಯನ್ನು ನೀಡದೆ ಇರಲು ಕಾರಣಗಳೇನು;

ಇ) ಬರುವ ಶೈಕ್ಷಣಿಕ ವರ್ಷದಲ್ಲಿ ಪ್ರಾರಂಭಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಈ) ಸಾಧ್ಯವಿಲ್ಲದಿದ್ದಲ್ಲಿ, ಕಾರಣಗಳೇನು?

ಶ್ರೀ ವಿಶ್ವೇಶ್ವರ ಹೆಗೆಡೆ ಕಾಗೇರಿ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ) ಬಂದಿರುತ್ತದೆ.

ಕುಂದಗೋಳ ಮತಕ್ಷೇತ್ರದ ಕುಂದಗೋಳ ಹಾಗೂ ಕುಂದಗೋಳ ತಾಲ್ಲೂಕಿನ ತರ್ಲಘಟ್ಟ, ಸಂಶಿ ಮತ್ತು ಹರ್ಲಾಪುರ ಗ್ರಾಮಗಳಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಅನುಮತಿ ನೀಡುವಂತೆ ಮನವಿಗಳು ಬಂದಿರುತ್ತದೆ.

ಧಾರವಾಡ ಜಿಲ್ಲೆಯಲ್ಲಿ ಒಟ್ಟು 10 ಕಾಲೇಜುಗಳು ಇದ್ದು, 05 ಸರ್ಕಾರಿ ಪದವಿ ಪೂರ್ವ ಕಾಲೇಜುಗಳು ಮತ್ತು 05 ಅನುದಾನ ಹಾಗೂ ಅನದಾನಿತ ಕಾಲೇಜುಗಳು ಕುಂದಗೋಳ ಮತಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿದೆ. 2011–2012 ನೇ ಸಾಲಿನ ವಿದ್ಯಾರ್ಥಿಗಳ ಸಂಖ್ಯೆ ಈ ಕೆಳಕಂಡಂತಿದೆ.

ಕಾಲೇಜಿನ ಹೆಸರು ಮತ್ತು ವಿಳಾಸ	ಪ್ರಥಮ ಪಿಯುಸಿ			ದ್ವೀತಿಯ ಪಿಯುಸಿ		
	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
ಸರ್ಕಾರಿ ಪದವಿ ಪೂರ್ವ ಕಾಲೇಜು, ಗುಡಗೇರಿ ಕುಂದಗೋಳ ತಾ:	65	44	109	63	28	91
ಸರ್ಕಾರಿ ಪದವಿ ಪೂರ್ವ ಕಾಲೇಜು, ಕಮ್ಮಡೊಳ್ಳಿ ಕುಂದಗೋಳ ತಾ:	63	28	91	42	33	75
ಸರ್ಕಾರಿ ಪದವಿ ಪೂರ್ವ ಕಾಲೇಜು, ಹಿರೇಗುಂಗಳ, ಕುಂದಗೋಳ ತಾ:	38	17	55	39	12	51
ಸರ್ಕಾರಿ ಪದವಿ ಪೂರ್ವ ಕಾಲೇಜು, ಕುಂದಗೋಳ ತಾ:	113	63	176	69	63	112
ಸರ್ಕಾರಿ ಪದವಿ ಪೂರ್ವ ಕಾಲೇಜು, ಯರಗುಪ್ಪಿ, ಕುಂದಗೋಳ ತಾ:	20	11	31	14	08	22
ಜೆ.ಎಸ್.ಎಸ್.ಪದವಿ ಪೂರ್ವ ಕಾಲೇಜು, ಯಲಿವಾಳ,	22	13	35	35	18	53

ಕುಂದಗೋಳ ತಾ: ಜಿ.ಕೆ.ಹಿರೇಗೌಡರ ಪದವಿ ಪೂರ್ವ ಯಲಿವಾಳ, ಕುಂದಗೋಳ ತಾ: (ಅನುದಾನಿತ)	102	49	151	127	56	183
ಶ್ರೀ ಹರಭಟ್ಟ ಸಂಯುಕ್ತ ಪದವಿ ಪೂರ್ವ ಕಾಲೇಜು, ಕುಂದಗೋಳ ತಾ: (ಅನುದಾನಿತ)	92	54	146	109	88	197
ಎಸ್.ಯು.ಎಜೆ. ಪದವಿ ಪೂರ್ವ ಕಾಲೇಜು, ಕುಬೀಹಾಳ್, ಕುಂದಗೋಳ ತಾ: (ಅನುದಾನಿತ)	54	34	88	72	41	113
ಕೆ.ಎಲಸಇ ಪದವಿ ಪೂರ್ವ ಕಾಲೇಜು ಸಂಶಿ ಕುಂದಗೋಳ ತಾ: (ಅನುದಾನ ರಹಿತ)	101	51	152	99	51	160

ಸರ್ಕಾರಿ ಪದವಿ ಪೂರ್ವ ಕಾಲೇಜು ತರಲಘಟ್ಟ ಕುಂದಗೋಳ ತಾ: ಸರ್ಕಾರಿ ಆದೇಶ ಸಂ: ಇಡಿ 73 ಎಸ್.ಹೆಚ್.ಹೆಚ್. 2006 (2) ಬೆಂಗಳೂರು, ದಿನಾಂಕ 29-06-2006 ಇದರನ್ವಯ ಕಾಲೇಜು ಮಂಜೂರಾಗಿದ್ದು, ಕಾಲೇಜು ಪ್ರಾರಂಭವಾಗಿರುವುದಿಲ್ಲ.

ಆ) ಹಾಲಿ ಪ್ರಾರಂಭಿಸಲಾಗಿರುವ ಹೊಸ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸುವವರೆಗೆ ಯಾವುದೇ ಹೊಸ ಕಾಲೇಜುಗಳಿಗೆ ಪ್ರಸ್ತಾವನೆಯನ್ನು ಸಲ್ಲಿಸಬಾರದೆಂದು ಸರ್ಕಾರವು ಆದೇಶ:ಇಡಿ 451 ಯೋಯೋಕ 2009, ದಿನಾಂಕ: 20-02-2010ರಲ್ಲಿ ಆದೇಶಿಸಿದೆ.

ಇ) ಸ್ಥಳೀಯ ಅಗತ್ಯತೆಗಳ ಆಧಾರದಲ್ಲಿ ಪರಿಶೀಲಿಸಲಾಗುವುದು.

ಈ) ಹಾಲಿ ಇರುವ ಸರ್ಕಾರಿ ಕಾಲೇಜುಗಳನ್ನು ಸುಸಜ್ಜಿತಗೊಳಿಸಲು ಆದ್ಯತೆ ನೀಡಲಾಗುತ್ತಿದೆ.

ಪೌಷ್ಟಿಕಾಂಶ ಕೊರತೆ ಇರುವ ಮಕ್ಕಳ ಆರೋಗ್ಯ ರಕ್ಷಣೆಗಾಗಿ ಸರ್ಕಾರದ ಕ್ರಮಗಳು

230 (876) ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ) :- ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-